# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬೀದರ ಜಿಲ್ಲೆಯ ಕಾರಂಜಾ ಜಲಾಶಯ ಮೂಲದಿಂದ ಭಾಲ್ಕಿ ಪಟ್ಟಣ ಹಾಗೂ ಮಾರ್ಗ ಮಧ್ಯದ 23 ಹಳ್ಳಿಗಳಿಗೆ ರೂ.140.54 ಕೋಟಿ ಮೊತ್ತದ ಅಂದಾಜು ವೆಚ್ಚದಲ್ಲಿ ಸಮಗ್ರ ಕುಡಿಯುವ ನೀರು ಸರಬರಾಜು ಯೋಜನೆಯನ್ನು ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ

******

Managing Director's Office
KUWS&D Board, B'lore
(For Necessary Action)
PS/PA
CE (Kal)
5/6/17

ಓದಲಾಗಿದೆ:

1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು ಇವರ ಪತ್ರ ಸಂಖ್ಯೆ: ಕಜಮ/ಮುಅಕ/ಭಾಲ್ಕಿ ಹಾಗೂ 23 ಹಳ್ಳಿಗಳು/2016-17/ 3013 ದಿನಾಂಕ 11/01/2017 ಮತ್ತು 09/05/2017.
2. ಸರ್ಕಾರದ ಆದೇಶ ಸಂಖ್ಯೆ: ನಅಇ 7 ಯುಡಬ್ಲ್ಯೂಎಸ್ 2011, ದಿನಾಂಕ 20/7/2011

ಪ್ರಸ್ತಾವನೆ:

1) ಮೇಲೆ (1) ರಲ್ಲಿ ಓದಲಾದ ಪತ್ರಗಳಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಕಾರಂಜಾ ಜಲಾಶಯ ಮೂಲದಿಂದ ಬೀದರ ಜಿಲ್ಲೆಯ ಭಾಲ್ಕಿ ಪಟ್ಟಣ ಹಾಗೂ ಮಾರ್ಗ ಮಧ್ಯದ 23 ಹಳ್ಳಿಗಳಿಗೆ ಸಮಗ್ರ ಕುಡಿಯುವ ನೀರು ಸರಬರಾಜು ಯೋಜನೆಯನ್ನು ಕೈಗೊಳ್ಳಲು ರೂ.140.54 ಕೋಟಿ ಮೊತ್ತದ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

2) 2011 ರ ಜನಗಣತಿಯಂತೆ ಭಾಲ್ಕಿ ಪಟ್ಟಣದ ಜನಸಂಖ್ಯೆ 40333 ಇದ್ದು ಭಾಲ್ಕಿ ಪಟ್ಟಣ ಮತ್ತು ಮಾರ್ಗ ಮಧ್ಯದ 23 ಹಳ್ಳಿಗಳ 2048 ನೇ ಇಸವಿಗೆ ಅಂದಾಜಿಸಲಾದ ಒಟ್ಟು 178448 ಜನಸಂಖ್ಯೆಗೆ 19 ಎಂ.ಎಲ್.ಡಿ ಕುಡಿಯುವ ನೀರಿನ ಬೇಡಿಕೆ ಇರುತ್ತದೆ. ಹಾಲಿ ಪಟ್ಟಣಕ್ಕೆ ದಿನಂಪ್ರತಿ ತಲಾ 70 ಲೀಟರ್‌ನಂತೆ 3 ದಿನಕೊಮ್ಮೆ 4.54 ಎಂ.ಎಲ್.ಡಿ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಕಾರಂಜ ನದಿಯು ವರ್ಷದಲ್ಲಿ 5-6 ತಿಂಗಳು ಬತ್ತುವುದರಿಂದ ಪಟ್ಟಣವು ಬೇಸಿಗೆಯಲ್ಲಿ ತೀವ್ರ ಕುಡಿಯುವ ನೀರಿನ ಅಭಾವವನ್ನು ಎದುರಿಸುತ್ತಿದೆ. ಕಾರಂಜಾ ಜಲಾಶಯದಿಂದ ನೀರನ್ನು ಹರಿಸಿದರೂ ಸಹಾ ಜಲಾಶಯದಿಂದ 30 ಕಿ.ಮೀ. ದೂರದಲ್ಲಿರುವ ಮೂಲಸ್ಥಾವರಕ್ಕೆ ನೀರು ತಲುಪುವುದಿಲ್ಲ, ಆದ್ದರಿಂದ ಜನಪ್ರತಿನಿಧಿಗಳಿಂದ ಭಾಲ್ಕಿ ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆ ರೂಪಿಸಲು ಬೇಡಿಕೆ ಬರುತ್ತಿದೆ. ಆದ್ದರಿಂದ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಭಾಲ್ಕಿ ಪಟ್ಟಣ ಹಾಗೂ ಮಾರ್ಗ ಮಧ್ಯದ 23 ಹಳ್ಳಿಗಳಿಗೆ ಕಾರಂಜ ಜಲಾಶಯದಿಂದ ನೀರು ಸರಬರಾಜು ಯೋಜನೆಯನ್ನು ಸಿದ್ಧಪಡಿಸಿದೆ. ಸಂಪೂರ್ಣ ಮೋಜಣಿ ನಂತರ ಭಾಲ್ಕಿ ಪಟ್ಟಣ ಹಾಗೂ ಮಾರ್ಗ ಮಧ್ಯದ 23 ಹಳ್ಳಿಗಳಿಗೆ ಕಾರಂಜ ಜಲಾಶಯ ಮೂಲದಿಂದ ಸಮಗ್ರ ಕುಡಿಯುವ ನೀರಿನ ಯೋಜನೆಗೆ ರೂ.14,054/- ಲಕ್ಷ ಮೊತ್ತದ ಅಂದಾಜು ಪಟ್ಟಿ ಸಿದ್ಧಪಡಿಸಿದೆ.

3) ಯೋಜನೆಗೆ ಲೋಕೋಪಯೋಗಿ ಇಲಾಖೆಯ ಕಲ್ಬುರ್ಗಿ ವೃತ್ತದ 2015-16 ನೇ ಸಾಲಿನ (2016-17ನೇ ಸಾಲಿಗೆ ಮುಂದುವರೆದಿದ್ದು) ದರಪಟ್ಟಿ, ಕರ್ನಾಟಕ ನಗರ ನೀರು



Scanned by CamScanner

ಸರಬರಾಜು ಮತ್ತು ಒಳಚರಂಡಿ ಮಂಡಳಿಯ 2015-16 ನೇ ದರಪಟ್ಟಿ ಮತ್ತು ದರಪಟ್ಟಿಯಲ್ಲಿ ಇಲ್ಲದ ಐಟಂಗಳಿಗೆ ಮಾರುಕಟ್ಟೆ ದರ ವಿಶ್ಲೇಷಣೆಯಂತೆ ಅಂದಾಜು ಪಟ್ಟಿ ತಯಾರಿಸಲಾಗಿದೆ.

4) ಜಲಸಂಪನ್ಮೂಲ ಇಲಾಖೆಯ ದಿನಾಂಕ 15/05/2017 ರಲ್ಲಿ ಬೀದರ್ ಜಿಲ್ಲೆಯ ಭಾಲ್ಕಿ ಪಟ್ಟಣ ಮತ್ತು 23 ಹಳ್ಳಿಗಳ ಸಮಗ್ರ ಕುಡಿಯುವ ನೀರು ಸರಬರಾಜು ಯೋಜನೆಗೆ ಜಲಾಶಯದ ನೀರಿನ ಒಳಹರಿವು, ನೀರಾವರಿ ಹಾಗೂ ಇತರೆ ಅಗತ್ಯತೆಗಳ ಬೇಡಿಕೆ ಪರಿಗಣಿಸಿ, ಪ್ರಸ್ತುತ (2018ನೇ ಸಾಲಿನ) ಬಳಕೆ ಮಾಡಲು ಪ್ರಸ್ತಾಪಿಸಿರುವ 6771.115 ಎಂ.ಎಲ್. (ವಾರ್ಷಿಕ 0.191 ಟಿ.ಎಂ.ಸಿ) ಪ್ರಮಾಣದ ನೀರನ್ನು ಕಾರಂಜಾ ಜಲಾಶಯದಿಂದ ಪಡೆಯಲು ಸಹಮತಿ ನೀಡಿದೆ.

5) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ದಿನಾಂಕ 28/04/2017 ರಲ್ಲಿ ಬೇಕಿರುವ 5.22 ಎಂಎಲ್‌ಡಿ ನೀರಿಗೆ ಅನುಗುಣವಾಗಿ ರೂ.12.37 ಕೋಟಿ ಮೊತ್ತ ಒದಗಿಸಲು ಸಹಮತಿ ನೀಡಿರುತ್ತದೆ.

6) ಸದರಿ ಯೋಜನೆಯಡಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಅನುವು ಮಾಡಲಾಗಿದೆ.

| Sl No | Component | Estimated Cost |
|---|---|---|
| I | **Common Components** | |
| 1 | Construction of Coffer Dam | 97,96,500 |
| 2 | Construction of 5.00m dia RCC Intake well | 16,68,931 |
| 3 | Providing and Laying 1000mm dia RCC NP-3 Class pipes Conneting Main from Intake well to Jack well for a length of 210m in 2 Rows | 1,62,56,055 |
| 4 | Construction of 10m dia RCC Circular Jack well and 14m dia Pump House over jack well | 2,44,84,615 |
| 5 | Construction of Approach Road from Existing Road to Jack well of 5.00m width for a lnegth of 260m | 1,33,17,747 |
| 6 | Supply, Reection, electrification and commissioing of 590HP / Suitable HP DWT Pumpsets with 100% Stand bye to lift Raw Water from jack well at Karanja Reservoir to WTP at Khatak Chincholi (283LPS against 107m Head) with Transformer substation. | 2,52,00,000 |
| 7 | Providing and Laying 610mm dia x6.4mm Thick MS Pipes Raw Water Rising Main from Head Works to WTP for a length of 15200m including Trench less technology for NH and Railway Crossings and allied works like Valve Chamers etc. | 14,54,62,007 |
| 8 | Construction of Service Road at WTP Premises | 3,57,825 |
| 9 | Construction of 20MLD Capacity out put Water Treatment Plant | 9,29,88,372 |
| 10 | Construction of 6.00Lakh Liter capacity RCC Clarified Water Sump at WTP Premises | 63,42,260 |
| 11 | Construction of Pump House 6.00x9.00m size | 16,54,654 |



Scanned by CamScanner

8) ಹಾಲಿ ಕಾರಂಜಾ ನದಿ ಮೂಲದಿಂದ ಭಾಲ್ಕಿ ಪಟ್ಟಣಕ್ಕೆ ಮೂರು ದಿನಕ್ಕೊಮ್ಮೆ ತಲಾ 70 ಎಲ್.ಪಿ.ಸಿ.ಡಿ ಯಂತೆ ನೀರು ಸರಬರಾಜು ಮಾಡಲಾಗುತ್ತಿದ್ದು ಬೇಸಿಗೆ ಸಮಯದಲ್ಲಿ ನದಿ ಬತ್ತಿ ಹೋಗುವ ಕಾರಣ ನೀರಿನ ಅಭಾವ ಉಂಟಾಗುತ್ತಿದೆ. ಆದ್ದರಿಂದ ಕಾರಂಜಾ ಜಲಾಶಯ ಮೂಲದಿಂದ ಭಾಲ್ಕಿ ಪಟ್ಟಣಕ್ಕೆ ನೀರು ಸರಬರಾಜು ಯೋಜನೆ ಅವಶ್ಯಕತೆ ಇರುತ್ತದೆ.

9) ಮೇಲೆ (4) ರಲ್ಲಿ ಓದಲಾದ ದಿನಾಂಕ 20/70/2011 ರ ಆದೇಶದ್ವಂತೆ ಯೋಜನೆಯ ಆರ್ಥಿಕ ಮಾದರಿಯು ಈ ಕೆಳಕಂಡಂತೆ ಇರುತ್ತದೆ.

| ವಿವರಣೆ | ಯೋಜನಾ ವೆಚ್ಚದ ಪಾಲು (ಶೇಕಡಾವಾರು) | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| ಕರ್ನಾಟಕ ಸರ್ಕಾರದ ಅನುದಾನ | 75 | 9612.75 |
| ಆರ್ಥಿಕ ಸಂಸ್ಥೆ ಸಾಲ | 20 | 2563.40 |
| ಸ್ಥಳೀಯ ಸಂಸ್ಥೆಯ ಪಾಲು | 5 | 640.85 |
| ಗ್ರಾಮೀಣಾಭಿವೃದ್ಧಿ ಇಲಾಖೆಯ ಪಾಲು (Incremental Cost) | – | 1237.00 |
| | ಒಟ್ಟು | 14054.00 |

10) ಸರ್ಕಾರವು ಪ್ರಸ್ತಾವನೆಯನ್ನು ಪರಿಗಣಿಸಿ, ಈ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ: ನಅಇ 07 ಯುಡಬ್ಲ್ಯೂಎಸ್ 2017</u>
<u>ಬೆಂಗಳೂರು, ದಿನಾಂಕ 31 ನೇ ಮೇ 2017</u>

11) ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕಾರಂಜಾ ಜಲಾಶಯ ಮೂಲದಿಂದ ಬೀದರ ಜಿಲ್ಲೆಯ ಭಾಲ್ಕಿ ಪಟ್ಟಣ ಹಾಗೂ ಮಾರ್ಗ ಮಧ್ಯದ 23 ಹಳ್ಳಿಗಳಿಗೆ ಸಮಗ್ರ ಕುಡಿಯುವ ನೀರು ಸರಬರಾಜು ಯೋಜನೆಯ ರೂ.140.54 ಕೋಟಿ ಮೊತ್ತದ ಅಂದಾಜು ಪಟ್ಟಿಗೆ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಆಡಳಿತಾತ್ಮಕ ಅನುಮೋದನೆ ನೀಡಿದೆ.

1) ಈ ಕಾಮಗಾರಿಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ನಿಯಮಾನುಸಾರ ಕೈಗೊಳ್ಳುವುದು.
2) ಕಾಮಗಾರಿಗೆ ಅಗತ್ಯವಿರುವ ಜಮೀನು ಲಭ್ಯವಿರಬೇಕು.
3) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು 2000 ಮತ್ತು ತತ್ಸಂಬಧ ಸರ್ಕಾರವು ಹೊರಡಿಸಿರುವ ಸುತ್ತೋಲೆ ಮತ್ತು ಆದೇಶಗಳಲ್ಲಿನ ಸೂಚನೆಗಳನ್ನು ಚಾಚೂ ತಪ್ಪದೆ ಪಾಲಿಸತಕ್ಕದ್ದು.
4) ಕಾಮಗಾರಿಯನ್ನು ನಿಗಧಿತ ಕಾಲಾವಧಿಯೊಳಗೆ ಪೂರ್ಣಗೊಳಿಸಬೇಕು.
5) ಕಾಮಗಾರಿಯ ವೆಚ್ಚ ಅನುಮೋದಿತ ಅಂದಾಜು ಪಟ್ಟಿಯ ವೆಚ್ಚಕ್ಕಿಂತ ಹೆಚ್ಚಾಗುವಂತಿಲ್ಲ ಮತ್ತು ಪರಿಷ್ಕರಣೆಗೆ ಅವಕಾಶ ನೀಡುವಂತಿಲ್ಲ.
6) ನೀರಿನ ಕರವನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಮಾದರಿಯಲ್ಲಿ ನಿಗಧಿ ಪಡಿಸತಕ್ಕದ್ದು.
7) ಒಂದು ವೇಳೆ, ಮೇಲಿನ ಸಾಲದ ವೆಚ್ಚವನ್ನು ಭರಿಸಲು ಭಾಲ್ಕಿ ಪುರಸಭೆಯು ವಿಫಲವಾದಲ್ಲಿ ಸರ್ಕಾರದಿಂದ ಭಾಲ್ಕಿ ಪುರಸಭೆಗೆ ನೀಡಲಾಗುವ ಎಸ್.ಎಫ್.ಸಿ. ಅನುದಾನದಲ್ಲಿ ನೇರವಾಗಿ ಕಡಿತಗೊಳಿಸಲಾಗುವುದು.



Scanned by CamScanner

| | | |
|---|---|---|
| 12 | Supply, Reection, electrification and commissioing of 130HP / Suitable HP C/F Pumpsets with 100% Stand bye to lift Clarified Water from Clarifier to Pure Water OHT Through Micro fibre filters at WTP (281LPS against 30m Head) with Transformer substation | 58,70,000 |
| 13 | Construction of 5.00Lakh Ltr Capacity RCC OHT Over 15m Staging (Break Pressure Tank) at WTP Premises | 96,54,448 |
| 14 | Providing and Fixing Bulk Water Meters at Head Works and WTP | 9,33,954 |
| 15 | Providing 11KV Power line from GESCOM MUSS at Khatak Chincholi to WTP/HW with Breakers | 1,40,80,000 |
| **II** | **Bhalki Components** | |
| 16 | Providing and laying 600mm to 250mm dia DI K-7 Class Pipes Feeder mains from WTP to Different OHTs in Bhalki Town for a length of 26946mtrs | 26,21,65,376 |
| 17 | Construction of 5.00Lakh Ltr Capacity RCC OHT Over 15m Staging at Siddarth nagar in Bhalki Town | 96,54,448 |
| 18 | Construction of 10.00Lakh Ltr Capacity RCC OHT Over 15m Staging Near BKIT Engineering College in Bhalki Town | 1,24,00,000 |
| 19 | Providing and laying Distribution Net work of DI/HDPE pipes ranging from 400mm dia to 75mm dia for a length of 135011mtrs in 7 Zones of Bhalki Town | 38,48,60,576 |
| 20 | Providing 6655Nos of House Service Connections with Smart Meters in 7 Zones of Bhalki Town | 7,46,19,853 |
| | **Sub-Total Rs.** | **1,11,17,67,621** |
| | Add: ETP Charges at 12% | 13,34,12,115 |
| | Add: Contingency at 3% | 3,33,53,029 |
| | Add: Labour Welfare Cess at 1% | 1,11,17,676 |
| | Add: Esclation in prices at 5% Per Annum for Two Years (10%) | 11,11,76,762 |
| | Add: Deposits to GESCOM, NH, PWD, Railways etc | 45,00,000 |
| | Add: Misc and Rounding Off | 72,797 |
| | **Grand Total Rs.** | **1,40,54,00,000** |

7) ಭಾಲ್ಕಿ ಪಟ್ಟಣದ ಪುರಸಭೆಯ ದಿನಾಂಕ 18/10/2016 ರ ಸಾಮಾನ್ಯ ಸಭೆಯಲ್ಲಿ ಭಾಲ್ಕಿ ಪಟ್ಟಣ ಹಾಗೂ ಮಾರ್ಗ ಮಧ್ಯದ 23 ಹಳ್ಳಿಗಳಿಗೆ ಕಾರಂಜಾ ಜಲಾಶಯದಿಂದ ಸಂಯುಕ್ತ ಕುಡಿಯುವ ನೀರು ಸರಬರಾಜು ಯೋಜನೆಗೆ ಸಿದ್ಧಪಡಿಸಲಾಗಿರುವ ಅಂದಾಜು ಮೊತ್ತ ರೂ.13656 ಲಕ್ಷಗಳಿಗೆ ಒಪ್ಪಿಗೆ ನೀಡಿರುತ್ತದೆ. ಅದರಂತೆ ಪುರಸಭೆಯ ವಂತಿಕೆಯಾದ ಶೇ.5 ರಷ್ಟು ಅಂದರೆ ರೂ.612.40 ಲಕ್ಷಗಳನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಪಾವತಿಸಲು ಪುರಸಭೆಯು ಒಪ್ಪಿಗೆ ನೀಡಿರುತ್ತದೆ.



Scanned by CamScanner

12) ಈ ಆದೇಶವನ್ನು ಆರ್ಥಿಕ ಇಲಾಖೆಯು ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 117 ವೆಚ್ಚ-9 /2017, ದಿನಾಂಕ 13/4/2017 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

31/5/2017

(ಈ. ಶಿವರುದ್ರಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಮಂಡಳ).

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸುವಂತೆ ಹಾಗೂ 50 ಪ್ರತಿಗಳನ್ನು ಈ ಕಚೇರಿಗೆ ಒದಗಿಸುವಂತೆ ಕೋರಿದೆ.

ಪ್ರತಿ:

1) ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ, ವಿಕಾಸ ಸೌಧ, ಬೆಂಗಳೂರು
4) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
5) ಅಧ್ಯಕ್ಷರು/ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳ, ಜಲಭವನ, ನಂ.5 ಬಿ.ಟಿ.ಎಂ ಲೇಔಟ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560029.
6) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ, ನಗರಾಭಿವೃದ್ಧಿ ಭವನ, #22, 17ನೇ 'ಎಫ್' ಕ್ರಾಸ್, ಹಳೆ ಮದ್ರಾಸ್ ರಸ್ತೆ, ಇಂದಿರಾನಗರ, 2ನೇ ಹಂತ, ಬಿ.ಎಂ.ಟಿ.ಸಿ ಬಸ್ ಡಿಪೋ ಹತ್ತಿರ, ಬೆಂಗಳೂರು-560038
7) ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ, ವಿಧಾನ ಸೌಧ (ವಿಷಯ ಸಂಖ್ಯೆ: ಸಿ-310/2017).
8) ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ವಿ.ವಿ. ಗೋಪುರ, ಬೆಂಗಳೂರು.
9) ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆ, ಬೀದರ್.
10) ಪೌರಾಯುಕ್ತರು, ಪುರಸಭೆ, ಭಾಲ್ಕಿ.
11) ನಗರಾಭಿವೃದ್ಧಿ ಮತ್ತು ಹಜ್ ಸಚಿವರ ಆಪ್ತ ಕಾರ್ಯದರ್ಶಿಗಳು.
12) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-3 & 9).
13) ಸರ್ಕಾರದ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
14) ಸರ್ಕಾರದ ಉಪ ಕಾರ್ಯದರ್ಶಿ-2, ನಗರಾಭಿವೃದ್ಧಿ ಇಲಾಖೆ.
15) ಶಾಖಾ ರಕ್ಷಾ ಕಡತ /ಹೆಚ್ಚುವರಿ ಪ್ರತಿಗಳು.



Scanned by CamScanner